<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ಇವರು ನಿಯಮ 72ರ ಮೇರೆಗೆ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ</u>

**ವಿಷಯ:**

**ಬೆಂಗಳೂರು ನಗರದ ಗಾಂಧಿಬಜಾರ್ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ರಸ್ತೆ ಕಾಮಗಾರಿಯನ್ನು ಕೈಗೊಂಡಿರುವುದರಿಂದ ಸ್ಥಳೀಯ ನಿವಾಸಿಗಳ ಮನೆಗಳಿಗೆ ಹಾಗೂ ತಳಪಾಯವಿಲ್ಲದ ಹೂವಿನ ಮಾರುಕಟ್ಟೆಯ ಅಕ್ಕಪಕ್ಕದ ರಸ್ತೆಗಳಿಗೆ ಮಳೆ ನೀರು ಸರಾಗವಾಗಿ ಅಧಿಕ ಪ್ರಮಾಣದಲ್ಲಿ ಹರಿದು ಬರುವುದರಿಂದ ಉಂಟಾಗುವ ತೊಂದರೆಗಳ ಕುರಿತಂತೆ ಹಾಗೂ ಸರಕು & ಲಾಜಿಸ್ಟಿಕ್ ವಾಹನಗಳ ಸಂಚಾರದಿಂದ ಜನಸಂದಣಿ ಉಂಟಾಗಿ ನಾಗರೀಕರ ಮತ್ತು ವಾಹನ ಸವಾರರಿಗೆ ಹಾಗೂ ಸದರಿ ರಸ್ತೆಯಲ್ಲಿನ ಸಣ್ಣ ಪುಟ್ಟ ವ್ಯಾಪಾರಿಗಳಿಗೆ ತೊಂದರೆಯುಂಟಾಗುವ ಕುರಿತು.**

**ಉತ್ತರ:**

ಗಾಂಧಿ ಬಜಾರ್ ಮುಖ್ಯ ರಸ್ತೆಯು ಬೆಂಗಳೂರಿನ ಹಳೆಯ, ಸಾಂಸ್ಕೃತಿಕ, ವಾಣಿಜ್ಯ ಚಟುವಟಿಕೆ ಪ್ರದೇಶವಾಗಿರುತ್ತದೆ. ಹಾಲಿ ಪ್ರದೇಶದ ರಸ್ತೆ ಹಾಗೂ ಪಾದಚಾರಿ ಮಾರ್ಗವು – ಬೀದಿ ವ್ಯಾಪಾರಿಗಳಿಂದ ಹಾಗೂ ಸಾರ್ವಜನಿಕರು ಮತ್ತು ವಾಹನ ದಟ್ಟಣೆಯಿಂದ ಕೂಡಿದ್ದು, ಇದರಿಂದ ಬೀದಿ ಬದಿ ವ್ಯಾಪಾರಿಗಳು, ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವುದನ್ನು ಪರಿಶೀಲಿಸಲಾಗಿರುತ್ತದೆ. ಈ ಜಾಗದಲ್ಲಿ ಒಂದು ಸುವ್ಯವಸ್ಥೆಯ ಪಾರಂಪರಿಕ ವ್ಯಾಪಾರ ಬೀದಿಯನ್ನಾಗಿ ಪರಿವರ್ತಿಸಲು ಹಾಗೂ ಸದರಿ ರಸ್ತೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹಳೆಯ ಸಾಂಸ್ಕೃತಿಕ ವಾಣಿಜ್ಯ ಪ್ರದೇಶವನ್ನಾಗಿ ಉಳಿಸಿಕೊಂಡು, ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ – ನಗರ ಭೂ ಸಾರಿಗೆ ನಿರ್ದೇಶನಾಲಯ (DULT- Directorate of Urban Land Transport) ಸಂಸ್ಥೆಯಿಂದ ನಿಯೋಜಿಸಲಾದ ವಾಸ್ತುಶಿಲ್ಪಿಗಳು, ನಗರ ತಜ್ಞರು (Urban Experts) ಗಳಿಂದ ಒಮ್ಮತದ ವಿನ್ಯಾಸ ತಯಾರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಗಾಂಧಿ ಬಜಾರ್ ಮುಖ್ಯ ರಸ್ತೆಯ ಕಾಮಗಾರಿಯು ಯಾವುದೇ ರೀತಿಯಲ್ಲಿ ಅವೈಜ್ಞಾನಿಕವಾಗಿರುವುದಿಲ್ಲ. ಈ ಯೋಜನೆಯನ್ನು DULT ಸಂಸ್ಥೆಯಿಂದ ನಿಯೋಜಿಸಲ್ಪಟ್ಟ ವಾಸ್ತುಶಿಲ್ಪಿಗಳಿಂದ ರೂಪಿಸಲಾಗಿರುತ್ತದೆ. ಸ್ಥಳೀಯ ಶಾಸಕರು, ಬೀದಿ ಬದಿ ವ್ಯಾಪಾರಿಗಳು, ಸಾರ್ವಜನಿಕರು ಹಾಗೂ RWH ರವರುಗಳ ಸಲಹೆಗಳನ್ನು ಒಳಗೊಂಡಂತೆ ಸಮಗ್ರವಾಗಿ ಅಭಿವೃದ್ಧಿಪಡಿಸಲು ಯೋಜನೆಯನ್ನು ರೂಪಿಸಲಾಗಿರುತ್ತದೆ.

ಮುಂದುವರೆದು, ಈ ರಸ್ತೆಯನ್ನು ಬೀದಿ ಬದಿ ವ್ಯಾಪಾರಿಗಳಿಗೆ, ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಅನುಕೂಲವಾಗುವಂತೆ ಮುಖ್ಯ ಕ್ಯಾರೇಜ್ ವೇ ಅನ್ನು (1) ದೀರ್ಘಬಾಳಿಕೆ "ವೈಟ್ ಟಾಪಿಂಗ್" ನಿಂದ ಅಭಿವೃದ್ಧಿಪಡಿಸುವುದು, (2) ಸಾರ್ವಜನಿಕರ ಓಡಾಟಕ್ಕೆ ಸುಸಜ್ಜಿತವಾದ ಪಾದಚಾರಿ ಮಾರ್ಗ ನಿರ್ಮಾಣ, (3) ಬೀದಿ ಬದಿಯ ವ್ಯಾಪಾರಿಗಳಿಗೆ ನಿರ್ದಿಷ್ಟವಾದ ಸ್ಥಳಗಳಲ್ಲಿ ಶೆಲ್ಟರ್‌ಗಳ ನಿರ್ಮಾಣ, (4) ರಸ್ತೆಯ ನೀರು ಅಕ್ಕ ಪಕ್ಕದ ರಸ್ತೆಗಳಿಗೆ ಹಾಗೂ ಕಟ್ಟಡಗಳಿಗೆ ಹರಿಯದಂತೆ ರಸ್ತೆಯ ಎರಡೂ ಬದಿಗಳಲ್ಲಿ 900. ಮಿ.ಮೀ ವ್ಯಾಸದ ಕಾಂಕ್ರೀಟ್ ಪೈಪ್‌ಗಳ ಚರಂಡಿ ಮಾರ್ಗ ಅಳವಡಿಕೆ, (5) ಬೆಸ್ಕಾಂ ಕೇಬಲ್ಸ್‌ಗಳಿಗೆ 200. ಮಿ.ಮೀ ವ್ಯಾಸದ ಎಚ್.ಡಿ.ಪಿ.ಇ ಪೈಪ್‌ಗಳ ಅಳವಡಿಕೆ, (6) ಓ.ಎಫ್.ಸಿ ಕೇಬಲ್ಸ್‌ಗಳಿಗೆ 100 ಮಿ.ಮೀ ವ್ಯಾಸದ ಎಚ್.ಡಿ.ಪಿ.ಇ ಪೈಪ್‌ಗಳ ಅಳವಡಿಕೆ ಮತ್ತು ಕಾಂಕ್ರೀಟ್ ಛೇಂಬರ್‌ಗಳ ನಿರ್ಮಾಣ, (7) ಮರಗಳ

. . .2/–

ಸುತ್ತ ಟ್ರೀ ಪಿಟ್ಸ್ ನಿರ್ಮಾಣ, (8) ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸುಸಜ್ಜಿತವಾದ ವಾಹನ ನಿಲುಗಡೆ ಸ್ಥಳ (9) ಜಂಕ್ಷನ್‌ಗಳನ್ನು ಉನ್ನತ ಮಟ್ಟದ ವಿನ್ಯಾಸದಂತೆ ಅಭಿವೃದ್ಧಿಪಡಿಸುವುದು ಮತ್ತು ಇನ್ನಿತರೆ ಕಾಮಗಾರಿಗಳನ್ನು ವೈಟ್‌ಟಾಪಿಂಗ್ ಫೇಸ್-2, ಪ್ಯಾಕೇಜ್-1ರ ಅಡಿಯಲ್ಲಿ ನಗರ ಭೂ ಸಾರಿಗೆ ನಿರ್ದೇಶನಾಲಯ (DULT) ಸಂಸ್ಥೆಯವರ ಸಹಯೋಗದೊಂದಿಗೆ ಗಾಂಧಿ ಬಜಾರ್ ಮುಖ್ಯ ರಸ್ತೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.

ಮೇಲಿನ ಎಲ್ಲಾ ಕ್ರಮಗಳನ್ನು ಸ್ಥಳೀಯ ನಿವಾಸಿಗಳ ಮನೆಗಳಿಗೆ ಹಾಗೂ ಹೂವಿನ ಮಾರುಕಟ್ಟೆಯ ಅಕ್ಕಪಕ್ಕದ ರಸ್ತೆಗಳಿಗೆ ಮಳೆ ನೀರು ಸರಾಗವಾಗಿ ಹರಿಯುವಂತೆ ಮಾಡಲಾಗಿರುತ್ತದೆ. ಸರಕು ಮತ್ತು ಲಾಜಿಸ್ಟಿಕ್ ವಾಹನಗಳ ಸಂಚಾರವನ್ನು, ಜನಸಂದಣಿಯನ್ನು, ನಾಗರೀಕರ ಮತ್ತು ವಾಹನ ಸವಾರರಿಗೆ ಹಾಗೂ ಸದರಿ ರಸ್ತೆಯಲ್ಲಿನ ಸಣ್ಣ ಪುಟ್ಟ ವ್ಯಾಪಾರಿಗಳಿಗೆ ತೊಂದರೆಯಾಗದಂತೆ ವ್ಯವಸ್ಥಿತವಾದ ಯೋಜನೆ ಒಳಗೊಂಡಿರುತ್ತದೆ. ಸದರಿ ಯೋಜನೆಯನ್ನು ಸ್ಥಳೀಯ ನಾಗರೀಕರಿಗಾಗಿ ವಿನ್ಯಾಸಗೊಳಿಸಲಾಗಿದ್ದು, ದಿನಾಂಕ: 31-05-2023ರ ಒಳಗಾಗಿ ಯೋಜನೆಯನ್ನು ಪೂರ್ಣಗೊಳಿಸಿ, ಸಾರ್ವಜನಿಕರಿಗೆ ಮುಕ್ತಗೊಳಿಸಲು ಉದ್ದೇಶಿಸಲಾಗಿರುತ್ತದೆ.

**ಸಂಖ್ಯೆ: ನಅಇ 104 ಎಂಎನ್‌ವೈ 2023 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ